(4) ರಾಜ್ಯದ ರೇಷ್ಮೆ ನೇಕಾರರಿಗೆ ವಿಧಿಸಿರುವ ಹೊಸ ಟ್ಯಾಕ್ಸ್.

* ಡಾ : ಜೀವರಾಜ್ ಅಳ್ವ : ಸಭಾಧ್ಯಕ್ಷರೆ, ಇದು ಅತ್ಯಂತ ಪ್ರಾಮುಖ್ಯ ವಿಚಾರ. ರೇಷ್ಮೆ ನೇಕಾರರು ಬಹಳಷ್ಟು ಜನ ನನ್ನ ಕ್ಷೇತ್ರದಲ್ಲಿ ಇದ್ದಾರೆ. ಈ ವಿಚಾರವನ್ನು ಎತ್ತಲಿಕ್ಕೆ ಮುಖ್ಯ ಕಾರಣ ಏನೆಂದರೆ This involves the resources of the State. ನಮ್ಮಲ್ಲಿ ಈ initial exuberance ಅಂತ ಹೇಳುತ್ತಾರಲ್ಲ, ಯಾವುದಾದರೂ ಪೈಬ್ರೆಂಟ್ ಎಕಾನಮಿಯಲ್ಲಿ the stress is to mobilise resources and not to put additional taxes. ಇಲ್ಲಿ ನಮ್ಮ ನೂತನ ಆರ್ಥಿಕ ಸಚಿವರು ಏಕೆ ಈ over exuberance and over enthusiam ತೋರಿಸಿದ್ದಾರೋ ಗೊತ್ತಿಲ್ಲ. ಆದರೆ ಏನಾಗಿದೆ ಎಂದರೆ ನಮ್ಮ ರಾಜ್ಯ ರೇಷ್ಮೆಗೆ ಹೆಮ್ಮೆಪಡುವಂಥ ರಾಜ್ಯ. ಶೇಕಡ 80ರಷ್ಟು ರೇಷ್ಮೆ ಉತ್ಪಾದನೆ ಮಾಡುವಂಥ ರಾಷ್ಟ್ರ. ಇವತ್ತು ಒಂದು ಅಡ್ವರ್ಟೈಸ್‌ಮೆಂಟ್ ಬಂದಿದೆ. ಆ ಅಡ್ವರ್ಟೈಸ್‌ಮೆಂಟ್ ಏನು ಹೇಳುತ್ತದೆಂದರೆ 40 ಮೈಲಿಯಲ್ಲಿರತಕ್ಕ ಹೊಸೂರಿಗೆ ನೀವು ಬಂದರೆ ಈ ಟ್ಯಾಕ್ಸ್ ಇಲ್ಲ, ಹೊಸ ಟ್ಯಾಕ್ಸ್ ಇಲ್ಲ, ನೀವು ಬಂದರೆ 300 ರೂಪಾಯಿ ಸೇವೆ ಮಾಡುತ್ತೀರಿ ಎಂದು ಹೇಳುತ್ತಾರೆ. ಇದು ಎಷ್ಟರಮಟ್ಟಿಗೆ ನಮ್ಮ ಸರ್ಕಾರದ ಹಣದ ಉಳಿತಾಯಕ್ಕೆ ತೊಂದರೆಯಾಗುತ್ತದೆ ಎನ್ನುವುದನ್ನು ಗಮನ ಕೊಡಬೇಕಾಗುತ್ತದೆ. ನಾಳೆ ಆಲೋಚನೆ ಮಾಡಬೇಕಾಗುತ್ತದೆ. ಏಕೆಂದರೆ ಮದುವೆ ಕಾಲ. ಆದ್ದರಿಂದ It is a very serious matter. It is flouting financial ethics. ಬರುತ್ತದೆ. ಅಡ್ವರ್ಟೈಸ್‌ಮೆಂಟ್ ಮಾಡುತ್ತಾರೆ. ಇವತ್ತು ಬಂದಿದೆ ತಾವು ನೋಡಬೇಕು. ಈ ಟ್ಯಾಕ್ಸ್‌ನಲ್ಲಿ ಈ ತರಹ ನಮ್ಮಲ್ಲಿ ಕಡಿಮೆ ಇದೆ, ಇಷ್ಟು ಪರ್ಸೆಂಟ್ ಕಡಿಮೆ ಇದೆ, ನಮ್ಮಲ್ಲಿ ಯಾವ ಟ್ಯಾಕ್ಸೂ ಇಲ್ಲ. ಸಿಲ್ಕ್ ಉತ್ಪಾದನೆ ನೀವು ಇದಕ್ಕೆ ಸ್ವಲ್ಪ ಗಮನ ಕೊಡಬೇಕು ಇದು ಬಹಳ ಗಂಭೀರವಾದ ವಿಚಾರ. ಮಾನ್ಯ ಮುಖ್ಯಮಂತ್ರಿಗಳು ಆರ್ಥಿಕ ಸಚಿವರನ್ನು ಕರೆದು ಹೇಳಬೇಕು. ಏಕೆಂದರೆ ಹೊಸ ಟ್ಯಾಕ್ಸಸ್ ಹಾಕಬಹುದು. 60 ಕೋಟಿ 80 ಕೋಟಿ ಮಾಡುವುದಕ್ಕಿಂತ the tax structure has to be improved. Resource mobilisation can be improved.

ಅದು ಬಿಟ್ಟು ಹೊಸಹೊಸದು ಮಾಡಿ ಇದೇನು ? The very principles of Adam Smith, the architect of Taxation, have been flouted. There is no scientific analysis. There is no certainty.

ಶ್ರೀ ಹೆಚ್.ಡಿ. ದೇವೇಗೌಡ : ಯಾರಿಗೆ ಅಪಾಯ ಆಗಿದೆ ಸ್ವಲ್ಪ ಹೇಳಿ ನೋಡೋಣ. ಅದು ಯಾರಿಗೆ ಆಗಿದೆ ಸ್ವಲ್ಪ ಹೇಳಿ.

ಡಾ : ಜೀವರಾಜ್ ಅಳ್ವ : ನಾನು ಅಡ್ವರ್ಟೈಸ್‌ಮೆಂಟ್ ಬಗ್ಗೆ ಸೀಮಿತವಾಗಿ ಹೇಳುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ : ನಾನು ನಿಮ್ಮಷ್ಟು ತಿಳಿದುಕೊಳ್ಳದೇ ಇದ್ದರೂ ಅದು ಯಾರೋ ಹಿಂದುಗಡೆ ನಡೆಸುತ್ತಿದ್ದಾರೆ, ಎಂಬುದು ಗೊತ್ತಿದೆ ನನಗೆ. ದಯಮಾಡಿ ಯಾರಿಗೆ ತೊಂದರೆಯಾಗಿದೆ ಹೇಳಿ ನೋಡೋಣ.

ಡಾ : ಜೀವರಾಜ್ ಅಳ್ವ : ಇವತ್ತು ಅಡ್ವರ್ಟೈಸ್‌ಮೆಂಟ್ ಬಂದಿದೆ.

ಶ್ರೀ ಹೆಚ್.ಡಿ. ದೇವೇಗೌಡ : ಅಡ್ವರ್ಟೈಸ್‌ಮೆಂಟ್‌ನ್ನು ಮದ್ರಾಸ್‌ನಿಂದಲೂ ಕೊಡಿಸಬಹುದು ಕೇರಳದಿಂದಲೂ ಕೊಡಿಸಬಹುದು. ಇದರ ಹಿಂದುಗಡೆ ಯಾರಿದ್ದಾರೆ ಎಂಬುದು ಗೊತ್ತಿದೆ.

ಡಾ : ಜೀವರಾಜ್ ಅಳ್ವ : ಅದನ್ನು ಹೇಳಬೇಕು ಮುಖ್ಯಮಂತ್ರಿಗಳು. ನನ್ನ ಭಾವನೆಗಳು ಏನೆಂದರೆ ಚಿಕ್ಕಪೇಟೆ ಕ್ಷೇತ್ರದಲ್ಲಿ ನೇಕಾರರು .....

ಶ್ರೀ ಬಿ. ಎಸ್. ಯಡಿಯೂರಪ್ಪ : ರೇಷ್ಮೆ ಗೂಡು ಒಂದು ಕೆ.ಜಿ.ಗೆ 20ರಿಂದ 30 ರೂಪಾಯಿ ಕಳೆದ ಒಂದು ವಾರದಿಂದ ಕಡಿಮೆಯಾಗಿದೆ. ಇದು ಗೊತ್ತಿದೆ ತಾನೆ ?

ಡಾ : ಜೀವರಾಜ್ ಅಳ್ವ : ಅವರು ಅನ್ಯಥಾ ಭಾವಿಸಬಾರದು. There is no necessity for him to be provoked. It is a very serious matter pertaining to the State.

ಅದು ಗೊತ್ತಿದ್ದರೆ ಮಾನ್ಯ ಮುಖ್ಯಮಂತ್ರಿಗಳು ನಮ್ಮ ಹತ್ತಿರ ಹೇಳಬಹುದು. .I am prepared to concede any argument. If there is a conspiracy, if there is a vested interest, the Chief Minister should take the House into confidence and tell us.

ಅಧ್ಯಕ್ಷರೇ, ನನ್ನ ಭಾವನೆಗಳೇನೆಂದರೆ ಚಿಕ್ಕಪೇಟೆ ಕ್ಷೇತ್ರದಲ್ಲಿ ಬಹಳಷ್ಟು ನೇಕಾರರಿದ್ದಾರೆ. ಒಂದು ವೇಳೆ ಇನ್ನೂ ಹೆಚ್ಚು ಜನರು ಇದ್ದರೆ ಇಂಟರ್‌ನ್ಯಾಷನಲ್ ಮಾರ್ಕೆಟ್ಟಿನಲ್ಲಿ ನಾವು ಕಾಂಪೀಟ್ ಮಾಡುತ್ತಿದ್ದೆವೂ ನನಗೆ ಗೊತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳಿಗೆ ತಮ್ಮ ಮೂಲಕ ತಿಳಿಸುವುದಕ್ಕೆ ಇಷ್ಟಪಡುತ್ತಿದ್ದೇನೆ ಸತ್ಯವಾಗಿಯೂ I am not aware. I am ignorant. My preception of the problem is towards ನನ್ನ ನೇಕಾರರು 500 - 600 ಫ್ಯಾಮಿಲಿಗಳು ಚಿಕ್ಕಪೇಟೆಯಲ್ಲಿದ್ದಾರೆ.

ಮಾನ್ಯ ಬೈರೇಗೌಡರೆ ನಾನು ಹೇಳುತ್ತಾ ಇರುವುದು ....

ಶ್ರೀ ಬಿ. ಎಸ್. ಯಡಿಯೂರಪ್ಪ : ರೇಷ್ಮೆ ಗೂಡು ಒಂದು ಕಿಲೋಗೆ 20ರಿಂದ 30 ರೂಪಾಯಿ ಕಡಿಮೆಯಾಗಿರುವುದು ನಿಜ ತಾನೆ ?

ಶ್ರೀ ಸಿ. ಬೈರೇಗೌಡ : ಇನ್ನೂ ಕಡಿಮೆಯಾಗಿತ್ತು. ಸ್ವಲ್ಪ ದಯವಿಟ್ಟು ಕೇಳಿ. ಮಾನ್ಯ ಜೀವರಾಜ್ ಅಳ್ವ ಅವರಿಗಾಗಲೀ ಅಥವಾ ತಮಗಾಗಲೀ ರೇಷ್ಮೆ ಬಗ್ಗೆ ಪೂರ್ತಿಯಾಗಿ ಗೊತ್ತಿಲ್ಲ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ ಏಕೆಂದರೆ ಇದರ ಕಷ್ಟವನ್ನು ಅನುಭವಿಸುತ್ತಾ ಇರುವವರು ನಾವು.

(ಭಾರತೀಯ ಜನತಾ ಪಕ್ಷದ ಹಲವಾರು ಸದಸ್ಯರು ಒಮ್ಮೆಲೇ ಎದ್ದುನಿಂತು ಒಟ್ಟಾಗಿ ಮಾತನಾಡುತ್ತಿದ್ದರು. ಯಾವುದೂ ಸ್ಪಷ್ಟವಾಗಿ ಕೇಳಿಸುತ್ತಿರಲಿಲ್ಲ. ಗೊಂದಲದ ವಾತಾವರಣ ಇತ್ತು.)

ಶ್ರೀ ಸಿ. ಬೈರೇಗೌಡ : ಇವತ್ತು ನೇಕಾರರಿಗೆ ತೊಂದರೆಯಾಗಿಲ್ಲ. ಬಟ್ಟೆ ಮಾರತಕ್ಕವರಿಗೆ ತೊಂದರೆಯಾಗಿಲ್ಲ. ಆಗಿರತಕ್ಕದ್ದು ಬಳಕೆದಾರರಿಗೆ. ಬಳಕೆದಾರರಿಂದ ವಸೂಲು ಮಾಡತಕ್ಕದ್ದು. ಈಗಾಗಲೇ ಅವರನ್ನು ಕರೆದು ನಾವು ಮಾತನಾಡಿದ್ದೇವೆ. ಅದರ ಬಗ್ಗೆ ಚರ್ಚೆ ಮಾಡಬೇಕು ಎಂದೂ ಕೂಡ ಆಗಿದೆ. ಈ ಮಧ್ಯದಲ್ಲಿ ಇದು ಏತಕ್ಕೆ ?

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ.

ಡಾ : ಜೀವರಾಜ್ ಆಳ್ವ : ಸತ್ಯವಾಗಿ ನಾನು ಇಗ್ನೊರೆಂಟ್. ಏನಾದರೂ ಇದ್ದರೆ ತಿಳಿಸಲಿ. ದೇವರಾಜ್ ನನಗೆ ಗೊತ್ತಿಲ್ಲ. ನನ್ನ ಕ್ಷೇತ್ರಕ್ಕೆ ಸೀಮಿತವಾಗಿ ಏನೂ ತೊಂದರೆ ಇಲ್ಲ.

ಅಧ್ಯಕ್ಷರು : ಮೂರು ಜನ ಒಟ್ಟಿಗೆನಿಂತುಕೊಂಡರೆ ಹೇಗೆ ? ಒಂದು ನಿಮಿಷ ವಾಟಾಳ್ ಅವರೆ ....

ಡಾ : ಜೀವರಾಜ್ ಆಳ್ವ : ಆದರೆ ಸಾಧಾರಣವಾಗಿ what I am worried about is truthfully I am saying. It is uncharitable. Mr. Byregowda has no business to say.

ಶ್ರೀ ಸಿ. ಬೈರೇಗೌಡ : ನಾನು ಹೇಳಿದುದ್ದು ಏನೆಂದರೆ .....

ಡಾ : ಜೀವರಾಜ್ ಆಳ್ವ : ಏನ್ರೀ ಕುಳಿತುಕೊಳ್ಳಿ. ನಿಮಗೆ ಬಹಳ ಗೊತ್ತು.

ಶ್ರೀ ಸಿ. ಬೈರೇಗೌಡ : ನನಗೆ ಗೊತ್ತಿಲ್ಲ ಅಂತ ನೀವು ಹೇಳುವುದು.

ಡಾ : ಜೀವರಾಜ್ ಆಳ್ವ : ನಿಮಗೆ ಬೋರ್‌ವೆಲ್ಸ್ ಎಲೆಕ್ಟ್ರಿಸಿಟಿ ಗೊತ್ತಿದೆ ಅಷ್ಟೆ. ನೀವು ಇಲ್ಲಿ ಕುಳಿತಾಗ ಏನೇನು ಮಾತನಾಡುತ್ತಿದ್ದೀರಿ ಎಂದು ಗೊತ್ತಿದೆ.

ಶ್ರೀ ಸಿ. ಬೈರೇಗೌಡ : ಹೌದು, ಈಗಲೂ ಮಾತನಾಡುತ್ತೇನೆ. ಅಲ್ಲಿ ಕುಳಿತರೆ ಬೇರೆ ಇಲ್ಲಿ ಕುಳಿತರೆ ಬೇರೆ, ನಾನು ಆ ತರಹ ಅಲ್ಲ. ನನಗೆ ಗೊತ್ತಿಲ್ಲ ಎಂದು ನೀವೇ ಹೇಳಿದಿರಲ್ಲ.

(ಗೊಂದಲ)

ಶ್ರೀ ಎಸ್.ಆರ್. ಲಕ್ಷಯ್ಯ : ರೇಷ್ಮೆ ಬಗ್ಗೆ ಹೇಳಿ. ಬೈರೇಗೌಡರ ಬಗ್ಗೆ ಬೇಡ.

ಡಾ : ಜೀವರಾಜ್ ಆಳ್ವ : ಸಭಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ನಾವು ಒಪ್ಪುತ್ತೇವೆ. ಆದರೆ ಇವರ ಮಾತಿದೆಯಲ್ಲ, ಇವರು ಕುಳಿತು ಪ್ರತಿ ವಿಧಾನಸಭೆಯಲ್ಲಿ ಹೇಳುತ್ತಿದ್ದರು. ಪ್ರತಿ ದಿನ ಎಲೆಕ್ಟ್ರಿಸಿಟಿ ಹೋಯಿತು

ಬೋರ್‌ವೆಲ್ ಹೋಯಿತು ಎಂದು ನಿಮಿಷ ನಿಮಿಷಕ್ಕೂ ಹೇಳುತ್ತಿದ್ದರು. ಪತ್ರಿಕೆಯಲ್ಲಿ ಬರಬೇಕಲ್ಲ ಅದಕ್ಕೆ ಮಾತನಾಡುತ್ತಿದ್ದರು. ಆಗ ನಾವೇನಾದರೂ ಅಡ್ಡ ಬಂದೆವೋ ?

ಶ್ರೀ ಸಿ. ಬೈರೇಗೌಡ : ಇವರಿನ್ನೇನು ? ಪತ್ರಿಕೆಯಲ್ಲಿ ಬರಲಿ ಅಂತಲೇ ಇವರೂ ಮಾತನಾಡುತ್ತಿರುವುದು. ರೈತರ ಬಗ್ಗೆ ಏನು ಬಹಳ ಕಳಕಳಿ ಇದೆಯೋ ? ಇವರಿಂದ ತಿಳಿದು ರೈತರ ಬಗ್ಗೆ ಏನು ಎಂದು ಇವರಿಂದ ತಿಳಿದುಕೊಳ್ಳಬೇಕೇ

(ಗೊಂದಲ)

ಡಾ : ಜೀವರಾಜ್ ಆಳ್ವ : ಮಾನ್ಯ ಸಭಾನಾಯಕರು ಹೇಳಿದರು ತಿಳಿದುಕೊಳ್ಳಬೇಕು ಎಂದು. ಹೌದು ರೇಷ್ಮೆ ಬಗ್ಗೆ ತಿಳಿದುಕೊಳ್ಳುತ್ತೇನೆ. ಪ್ರಾಮಾಣಿಕವಾಗಿ ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುವಾಗ ಜೀವರಾಜ್ ಆಳ್ವ ಅವರಿಗೆ ಏನು ಗೊತ್ತಿದೆ ಎಂದರೆ ಏನ್ರಿ ಅದು ?

(ಗೊಂದಲ)

ಶ್ರೀ ಸಿ. ಬೈರೇಗೌಡ : ಪ್ರಾಮಾಣಿಕವಾಗಿ ನನಗೆ ಗೊತ್ತಿಲ್ಲ ಎಂದು ನೀವೇ ಹೇಳಿದಿರಲ್ಲ. ನೀವು ಹೇಳಿದ ಮಾತನ್ನು ನಿಮಗೆ ಹೇಳಿದರೆ ಏತಕ್ಕೆ ಸಿಟ್ಟು ಬರುತ್ತದೆ ? ನೀವು ಹೇಳಿಲ್ಲವೇ ?

ಡಾ : ಜೀವರಾಜ್ ಆಳ್ವ : ಒಳ್ಳೆಯ ಮಾತು ಕಲಿತುಕೊಳ್ಳಿ. ಇದೆಲ್ಲಾ ಹೇಳಬೇಡಿ.

ಶ್ರೀ ಸಿ. ಬೈರೇಗೌಡ : ನೀವೇ ಹೇಳಿದಿರಲ್ಲ ಗೊತ್ತಿಲ್ಲ ಎಂದು ಏತಕ್ಕೆ ಹೇಳಿದಿರಿ ?

ಡಾ : ಜೀವರಾಜ್ ಆಳ್ವ : ಏನು ಗೊತ್ತಿದೆ ಕುಳಿತುಕೊಳ್ಳಿ.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ಯಾವುದೇ ಒಂದು ಸಂದರ್ಭದಲ್ಲಿ ಹೇಗೆ ಮಾತು ಪ್ರಾರಂಭವಾಗುತ್ತದೆ ಎಂಬುದನ್ನೂ ತಾವು ಗಮನಿಸಿಕೊಳ್ಳುವುದಿಲ್ಲ. ಬಹಳ ವ್ಯಥೆಯಾಗುತ್ತದೆ. ಅವರು ಯಾವ ಅರ್ಥದಲ್ಲಿ ಹೇಳಿದರು ? ಇಲ್ಲಿರತಕ್ಕವರಲ್ಲಿ ಮಾತನಾಡುವುದು ಒಬ್ಬೊಬ್ಬರದು ಒಂದೊಂದು ಶೈಲಿ. ಅವರು ನಿಮಗೆ ಗೊತ್ತಿಲ್ಲ ಎಂದು ಹೇಳುವುದರ ಅರ್ಥ ಏನೆಂದರೆ, ನಿಮಗೇನೂ ಗೊತ್ತೇ ಇಲ್ಲ, ನಾನೇ ಪರಿಣಿತ, ಮೇಧಾವಿ ಎನ್ನುವ ಅರ್ಥ ಅಲ್ಲ ಅವರು ಹೇಳಿದ್ದುದು. ರೇಷ್ಮೆ ವಿಚಾರಕ್ಕೆ ಕೋಲಾರ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಸ್ವಲ್ಪ ಭಾಗ ಮೈಸೂರು ಇಲ್ಲಿ ಹೆಚ್ಚಿಗೆ ರೇಷ್ಮೆ ಬೆಳೆಯುವವರಿದ್ದಾರೆ, ನಾನು ಸ್ವತಃ ರೇಷ್ಮೆ ಕೃಷಿಕ, ಹಾಗಾಗಿ ರೇಷ್ಮೆ ಗೂಡಿನ ವಿಚಾರದಲ್ಲಿ ಆಗಾಗ ಆಗಿರತಕ್ಕ ಏರಿಳಿತಗಳು ಅದನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳಿದರೇ ಹೊರತು ಯಾರನ್ನೂ ಲಘುವಾಗಿ ಕಾಣಬೇಕು ಎಂದಲ್ಲ. ಅವರು ಹೇಳಿದ ಧಾಟಿ ಸರಿಹೋಗದೇ ಇದ್ದುದರಿಂದ ತಕ್ಷಣ ತಾವು ಪ್ರೊವೋಕ್ ಆದಿರಿ. ದಯವಿಟ್ಟು ಇದನ್ನು ಇಲ್ಲಿಗೆ ಮುಕ್ತಾಯಗೊಳಿಸಿ. ಇಲ್ಲದಿದ್ದರೆ ಅಸಲು ವಿಷಯ ಪಕ್ಕಕ್ಕೆ ಹೋಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಒಂದು ನಿಮಿಷ ..

ಶ್ರೀ ಬಿ. ಎಸ್. ಯಡಿಯೂರಪ್ಪ : ಇದೇ ವಿಚಾರವೇ ?

ಶ್ರೀ ವಾಟಾಳ್ ನಾಗರಾಜ್ : ಇದೇ ವಿಚಾರ. ಕೋಪಿಸಿಕೊಳ್ಳಬೇಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ : ದಯವಿಟ್ಟು ನಾಗರಾಜ್ ಅವರೆ ನಾನು ಕೋಪಿಸಿಕೊಳ್ಳುವ ಪ್ರಶ್ನೆ ಇಲ್ಲಿ ಬಂದಿದೆಯೇ ?

ಅಧ್ಯಕ್ಷರು : ನೀವು ಐಕಮತ್ಯದಿಂದ ಇರಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ : ನನಗೆ ಅರ್ಥವಾಗುವುದಿಲ್ಲ. ನೀವು ಮಾತ್ತಿತ್ತಿದರೆ ನಾಗರಾಜ್ ಹೀಗೆ ಹೇಳುತ್ತೀರಿ. ಅಧ್ಯಕ್ಷರೆ, ಅವರು ಹಿರಿಯ ಸದಸ್ಯರಿದ್ದಾರೆ. ದಯಮಾಡಿ ಪದೇ ಪದೇ ನೀವು ಈ ರೀತಿ ಚುಚ್ಚುವಂತೆ ಅನಗತ್ಯವಾಗಿ ಆ ಮಾತು ಉಪಯೋಗಿಸಬೇಡಿ. ನಾನು ಕೋಪಿಸಿಕೊಂಡಿದ್ದೇನೋ ಆ ಸಂದರ್ಭ ಬಂದಿದೆಯೇ ? ರೇಷ್ಮೆ ವಿಷಯ ಮಾತನಾಡುವುದಾದರೆ ನೀವು ಮಾತನಾಡಿ, ನಾನು ಆಮೇಲೆ ಮಾತನಾಡುತ್ತೇನೆ. ಯಾವುದೇ ವಿಚಾರ ಇರಬಹುದು ನಿಮಗೆ ಆದ್ಯತೆ ಕೊಡುತ್ತೇನೆ. ನಂತರ ನಾನು ಮಾತನಾಡುತ್ತೇನೆ.

ಅಧ್ಯಕ್ಷರು ನೀವು ದೂರದಲ್ಲಿದ್ದೀರಿ. ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಕೋಪದಲ್ಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಯಡಿಯೂರಪ್ಪನವರ ಮೇಲೆ ನಾನು ಏನು ಮಾತನಾಡಿದ್ದೇನೆ ಅದೆಲ್ಲವನ್ನೂ ಬೇಷರತ್ತಾಗಿ ನಾನು ಹಿಂದೆ ಪಡೆದಿದ್ದೇನೆ. ಮತ್ತು ಅವರು ಕ್ಷಮಾಪಣೆ ಕೇಳಬೇಕು ಎಂದರೆ ಸಾರ್ವಜನಿಕವಾಗಿ ಕ್ಷಮಾಪಣೆಯನ್ನೂ ಕೇಳುತ್ತೇನೆ. ಎಷ್ಟು ಸಾರಿ ಕೇಳಬೇಕು ಎಂದರೆ ನೂರು ಸಾರಿ ಕೇಳುತ್ತೇನೆ. ಸರಿಯಾ ಸ್ವಾಮಿ. ಮುಗಿಯಿತು. ಮಾನ್ಯ ಅಧ್ಯಕ್ಷರೇ, ರೇಷ್ಮೆ ವಿಚಾರ. ಒಂದು ಪ್ರಶ್ನೆ. ಬೈರೇಗೌಡರು ಪಾಪ, ಅವರ ಮೇಲೆ ಕೋಪ ಏನೂ ಇಲ್ಲ. ಇಲ್ಲಿ ಹೇಗೆ ಕುಳಿತಿದ್ದರು ಅಲ್ಲೂ ಅದೇ, ಅವರೇನೂ ಬದಲಾವಣೆಯಂತೂ ಆಗಿಲ್ಲ. ಬದಲಾವಣೆ ಆಗುವುದಕ್ಕೆ ಸಾಧ್ಯವೂ ಇಲ್ಲ. ಏಕೆಂದರೆ ಅವರ ಜೀವ ಹಾಗಿದೆ. ನಾವು ಏಕೆ ಅವರನ್ನು ಬದಲಾವಣೆಯಾಗಿದ್ದೀರಿ ಎಂದು ಹೇಳಬೇಕು. ಪಾಪ ಅವರು ರೇಷ್ಮೆ ಬಗ್ಗೆ ಅಳವಾಗಿ ಅಭ್ಯಾಸ ಮಾಡಿದ್ದಾರೆ, ತಿಳಿದುಕೊಂಡಿದ್ದಾರೆ. ನಾವೇನೂ ಅವರನ್ನು ತಿಳಿದುಕೊಂಡಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಆದರೆ ಅವರು ಈ ಕಡೆ ಏನಾದರೂ ಇದ್ದಿದ್ದರೆ, ಅದೇ ಬೈರೇಗೌಡರು ಇಲ್ಲಿದ್ದಿದ್ದರೆ ಸ್ವಲ್ಪ ಹೆಚ್ಚು ಕಡಿಮೆ ಒಂದು ನೂರು ಸಾರಿ ಏಳುತ್ತಿದ್ದರು ಈ ರೇಷ್ಮೆ ವಿಚಾರದಲ್ಲಿ. ತಮಗೆ ನಾನು ಏನು ಹೇಳುತ್ತಿದ್ದೇನೆ ಎಂದರೆ ಇದು ಒಂದರಿಂದ ಎಲ್ಲರ ಮೇಲೆ ಇದರ ಪರಿಣಾಮ ಬೀರಿದೆ. ಇದು ನೇಕಾರರ ಮೇಲೆ ಬೀರಿದೆ. ಇದು ಯಾವ ಕಡೆ ಸುತ್ತಿಕೊಂಡು ಹೋದರೂ ಕೊಲೆಗೆ ಅಂತಿಮವಾಗಿ ರೇಷ್ಮೆ ಬೆಳೆಗಾರರ ಮೇಲೂ ಬರುತ್ತದೆ ಹೊಸೂರಿನಲ್ಲಿ ಜಾಹಿರಾತು. ತಾವು ನೋಡಿ. ಎಲ್ಲಾ ತೆರಿಗೆಗಳೂ ಇಲ್ಲ ಸೀರೆ ಅಲ್ಲಿ ಕೊಳ್ಳುವುದಾದರೆ, ಒಂದು ತೆರಿಗೆ. ನಮ್ಮಲ್ಲಿ ನೂರೆಂಟು ತೆರಿಗೆ ಆದರೆ ಅಲ್ಲಿ ಒಂದೂ ತೆರಿಗೆ ಇಲ್ಲ. ಇದು ಜಾಹಿರಾತು. ಇಂಡಿಯನ್ ಎಕ್ಸ್‌ಪ್ರೆಸ್

ಪತ್ರಿಕೆ. ಕನ್ನಡಪ್ರಭ ಪತ್ರಿಕೆ. ಈ ಪತ್ರಿಕೆಗಳಲ್ಲಿ ಜಾಹಿರಾತು ಬಂದಿದೆ. ನನಗನ್ನಿಸುತ್ತಿದೆ, ಇದರಿಂದಾಗಿ ಎಲ್ಲಾ ಬಂದ್ ಆಗಿದೆ, ರೇಷ್ಮೆ ಉದ್ಯಮ ಸಂಪೂರ್ಣ ಬಂದ್ ಆಗಿದೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳನ್ನು ತಮ್ಮ ಮೂಲಕ ಮಾನ್ಯ ಹಣಕಾಸಿನ ಸಚಿವರನ್ನು ಕೇಳಿಕೊಳ್ಳುವುದೇನೆಂದರೆ, ಆ ಮುಖಂಡರುಗಳನ್ನು ಕರೆದು ಇದನ್ನು ಸಮಂಜಸವಾಗಿ ಪರಿಶೀಲನೆ ಮಾಡಿ, ಇದ್ಯಾವುದೂ ತೊಂದರೆಯಾಗದ ರೀತಿ, ಈ ಒಂದು ಬಂದ್‌ನ್ನು ತೆಗೆಸಿ ಮತ್ತೆ ಇದರ ವಹಿವಾಟು, ವ್ಯಾಪಾರ ನಡೆಸತಕ್ಕ ವ್ಯವಸ್ಥೆಯನ್ನು ಮಾಡಬೇಕು, ಇದರಿಂದ ಇನ್ನೂ ಸ್ವಲ್ಪ ದಿವಸವಾಯಿತೆಂದರೆ, ನೇಕಾರರು ಬೀದಿಗೆ ಬರುತ್ತಾರೆ. ಅಮೇಲೆ ನೇಕಾರರು ಬೀದಿಗೆ ಬಂದರು ಅಂದರೆ, ಸೀರೆ ನೇಯುವವರು ಯಾರು ಇದ್ದಾರೆ, ಅವರು ಹೊರಗೆ ಬರುತ್ತಾರೆ. ಇದೊಂದರಲ್ಲೇ ಹೆಚ್ಚು ಕಡಿಮೆ ಬಂದು ಕೋಟಿ ಜನ ಬದುಕುತ್ತಿದ್ದಾರೆ. ಸರ್ಕಾರ ದೊಡ್ಡ ಮನಸ್ಸು ಮಾಡಿ ಏನು ತೆರಿಗೆಯನ್ನು ಹಾಕಿದ್ದಾರೆ, ಆ ಬಗ್ಗೆ ಸಂಬಂಧಪಟ್ಟವರನ್ನು ಕರೆದು ಅವರ ಜೊತೆ ಮಾತನಾಡಿ ಇದನ್ನು ಬಗೆಹರಿಸಬೇಕೆಂದು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ರೇಷ್ಮೆ ಮೇಲೆ ಮಾರಾಟ ತೆರಿಗೆಯನ್ನು ಏರಿಸಿರುವುದರ ಬಗ್ಗೆ ಇಲ್ಲೇ ನಾನು ಪ್ರಸ್ತಾಪ ಮಾಡಿದ್ದೇನೆ. ಸಂಬಂಧಪಟ್ಟ ಸಚಿವರಿಂದ ಹೇಳಿಕೆ ಕೊಡಿಸುತ್ತೇವೆಂದು ಹೇಳಿದಿರಿ. ಮಾನ್ಯ ಹಣಕಾಸಿನ ಸಚಿವರೂ ಸಹ ಇಲ್ಲೆಯೇ ಈ ತೆರಿಗೆಯನ್ನು ಇಳಿಸುವುದರ ಬಗ್ಗೆ ಯೋಚನೆ ಮಾಡುತ್ತೇವೆ ಎನ್ನುವಂತಹ ಮಾತನ್ನು ಹೇಳಿದರು. ಸನ್ಮಾನ್ಯ ಬೈರೇಗೌಡರು ಹೇಳಿದಂತೆ, ಅನೇಕ ಸಂಗತಿಗಳು ಪೂರ್ಣ ನನಗೆ ಗೊತ್ತಿಲ್ಲದಿದ್ದರೂ ಗೊತ್ತಿರುವ ಸಂಗತಿಯನ್ನು ಈ ಸ್ಥಾನದಲ್ಲಿ ನಿಂತುಕೊಂಡು ಅಧ್ಯಕ್ಷರ ಮೂಲಕ ಸರ್ಕಾರದ ಗಮನಕ್ಕೆ ತರುವಂತಹದ್ದು ನನ್ನ ಕರ್ತವ್ಯ. ಅದನ್ನು ನಾನು ಮಾಡುತ್ತಿದ್ದೇನೆ. ಅದರಲ್ಲಿ ಏನಾದರೂ ಕೊರತೆ ಇದ್ದರೆ, ನಾನು ಹೇಳುವುದರಲ್ಲಿ ಅಂಕಿ ಸಂಖ್ಯೆಗಳಲ್ಲಿ ವ್ಯತ್ಯಾಸ ಇದ್ದರೆ ಸರಿಪಡಿಸುದಕ್ಕೆ ತಾವು ಅನುಭವ ಇರತಕ್ಕಂತಹವರು, ಅದಕ್ಕೆ ನನ್ನದೇನೂ ಅಭ್ಯಂತರ ಇಲ್ಲ ಎಂದು ನಾನು ಅಂದುಕೊಂಡಿದ್ದೇನೆ. ಈ ರೇಷ್ಮೆ ಬಟ್ಟೆಗಳ ಮೇಲೆ ಹೊಸದಾಗಿ ಮಾರಾಟ ತೆರಿಗೆಯನ್ನು ತಾವು ಹಾಕಿರುವುದರಿಂದ, ಅದರ ಪರಿಣಾಮ ಕೇವಲ ರೇಷ್ಮೆ ಉದ್ದಿಮೆದಾರರ ಮೇಲೆ ಅಲ್ಲ, ನೇಕಾರರ ಮೇಲೂ ಆಗಿದೆ, ಹುರಿ ಮಾಡುವಂತಹವರ ಮೇಲೆ ಆಗಿದೆ, ಬಣ್ಣ ಮಾಡುವಂತಹವರ ಮೇಲೆ ಆಗಿದೆ. ಎಲ್ಲಾ ರೀತಿಯ ಜನಕ್ಕೆ ಇದರ ಮೇಲೆ ಸುಮಾರು 35 ಲಕ್ಷ ಕುಟುಂಬಗಳೇನು ಈ ಉದ್ದಿಮೆ ಮೇಲೆ ಅವಲಂಬಿತರಾಗಿದ್ದಾರೆ, ಅವರೆಲ್ಲರ ಮೇಲೆ ಇದು ಎಫೆಕ್ಟ್ ಆಗಿದೆ. 1991-92ರಲ್ಲಿ ಇದೇ ರೀತಿ ತೆರಿಗೆ ಜಾಸ್ತಿಯಾಗಿದ್ದಾಗ, ಇಲ್ಲೇ ಚರ್ಚೆಯಾಗಿದೆ. ಆ ಸಮಯದಲ್ಲಿ ನಾನು ಇಲ್ಲೇ ಇದ್ದೆ. ರಾಮನಗರ, ಶಿಡ್ಲಘಟ್ಟ, ಇನ್ನಿತರೆ ಸ್ಥಳಗಳಲ್ಲಿ ಸುಮಾರು 25 ಲಕ್ಷ ರೂ. ಗಳ ಗೂಡುಗಳು ಅವುಗಳನ್ನು ಕೊಂಡುಕೊಳ್ಳುವವರು ಇಲ್ಲದೆ ತಿಪ್ಪೆಗೆ ಎಸೆದಂತಹದ್ದು ನಿಮಗೆ ಗೊತ್ತಿದೆ, ಅಂತ ನಾನು ತಿಳಿದುಕೊಂಡಿದ್ದೇನೆ. ಇಲ್ಲಿ ಪ್ರಸ್ತಾಪ ಮಾಡಿದ್ದೀರಿ ನಾನು ಆ ದಾಖಲೆಯನ್ನು ತೆಗೆದು ತಮಗೆ ತೋರಿಸುತ್ತೇನೆ. ಇಲ್ಲಿ ಕುಳಿತಾಗ ಹೋರಾಟ ಮಾಡಿ, ನೀವು ನಾವೆಲ್ಲಾ ಒಟ್ಟಾಗಿ, ಆ ತೆರಿಗೆಯನ್ನು

ಏನು ಜಾಸ್ತಿ ಮಾಡಿದ್ದರು, ಅದನ್ನು ಕಡಿಮೆ ಮಾಡುವುದರಲ್ಲಿ ತಮ್ಮ ಪಾತ್ರ ಬಹಳ ದೊಡ್ಡದು ಇತ್ತು ಅನ್ನುವುದನ್ನು ಈ ಸಂದರ್ಭದಲ್ಲಿ ಜ್ಞಾಪಕ ಮಾಡುವುದಕ್ಕೆ ಇಷ್ಟಪಡುತ್ತೇನೆ. ಕಳೆದ 8 ದಿವಸಗಳಿಂದ, ಈ ರೇಷ್ಮೆ ಗೂಡಿನ ಬೆಲೆ ಕಿಲೋಗೆ ಸುಮಾರು 20-30 ರೂ. ಕಡಿಮೆಯಾಗಿದೆ. ರೇಷ್ಮೆ ಹುರಿಯನ್ನು ಕೊಳ್ಳುವವರು ಇಲ್ಲದೆ, ಆ ಯಂತ್ರಗಳು ಪೂರ್ತಿ ಹಾಳಾಗಿದೆ. ಕೈಮಗ್ಗದ ಈ ಯಂತ್ರಗಳು ಚಾಲನ ಚಾಲನೆಯಾಗದೆ ನಿಂತು ಹೋಗಿದೆ. ಎಲ್ಲದರ ಮೇಲೂ ಡಿಪೆಂಡ್ ಆಗಿದೆ.

ಅಧ್ಯಕ್ಷರು : ಆಯಿತು. ಅದನ್ನು ಸವಿಸ್ತಾರವಾಗಿ ಚರ್ಚೆಗೆ ತೆಗೆದುಕೊಳ್ಳೋದಿಕ್ಕೆ ಪ್ರಯತ್ನ ಮಾಡೋಣ. ದಯಮಾಡಿ ಮುಗಿಸಿ.

ಶ್ರೀ ಬಿ. ಎಸ್. ಯಡಿಯೂರಪ್ಪ : ಶೇ 70-80 ಭಾಗ ಇಲ್ಲಿ ನಾವು ರೇಷ್ಮೆ ಉದ್ದಿಮೆಯನ್ನು ಮಾಡುವಂತಹವರು. ಪಕ್ಕದ ಯಾವುದೇ ರಾಜ್ಯದಲ್ಲಿಲ್ಲ. ನಮ್ಮ ವ್ಯವಹಾರ ವಹಿವಾಟೆಲ್ಲಾ ಪಕ್ಕದ ರಾಜ್ಯಕ್ಕೆ ಹೊರಟು ಹೋಗುತ್ತೆ. ರೈತರ ಮೇಲೆ ದುಷ್ಪರಿಣಾಮವಾಗುತ್ತದೆ. ನೀವು ನಿಶ್ಚಯ ಮಾಡಿ. ಇಲ್ಲ ಯಡಿಯಾರಪ್ಪನವರೆ, ಸರ್ಕಾರದ ನಿಲುವು ಇದೆ ಅಂತ ಹೇಳಿ. ಆಮೇಲೆ ನೋಡೋಣ ಅಂತ ಹೇಳುವುದು ಬೇಡ. ಸರ್ಕಾರ ಸ್ಪಷ್ಟವಾಗಿ ಯಾವುದೇ ಕಾರಣದಿಂದ ಈ ತೆರಿಗೆಯನ್ನು ತೆಗೆದುಹಾಕುವಂತಹ ಪ್ರಶ್ನೆ ಇಲ್ಲ, ಇಳಿಸುವುದಿಲ್ಲ. ಇಲ್ಲದಿದ್ದರೆ ಅಪಾರ್ಥವಾಗುತ್ತದೆ. ಇಲ್ಲಿ ನಾವು ಪ್ರಸ್ತಾಪ ಮಾಡಿದಾಗ ಸಚಿವರು ಹೇಳಿಕೆ ಕೊಡುತ್ತಾರೆ ಅಂತ ಹೇಳುತ್ತಾರೆ. ಸಂಬಂಧಪಟ್ಟ ಹಣಕಾಸಿನ ಸಚಿವರು ಇದನ್ನು ತೆಗೆದುಹಾಕುವುದರ ಬಗ್ಗೆ ಪ್ರಸ್ತಾಪ ಮಾಡುತ್ತೇವೆ. ಗಮನಸಿಸುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಸದನದ ನಾಯಕರ ಗಮನಕ್ಕೆ ತರುತ್ತಿದ್ದೇನೆ. ಈ ಉದ್ದಿಮೆ ಹಾಳಾಗುತ್ತಿದೆ. ಲಕ್ಷಾಂತರ ಜನ ಈ ಉದ್ದಿಮೆಯ ಮೇಲೆ ಅವಲಂಬಿತರಾಗಿರುವವರು ಯಾರಿದ್ದಾರೆ, ಅವರಿಗೆ ತೊಂದರೆಯಾಗುತ್ತದೆ. ಇದು ಹಾಳಾಗಬಾರದು. ಪಕ್ಕದ ರಾಜ್ಯಕ್ಕೆ ಈ ಉದ್ದಿಮೆ ಹೋಗಬಾರದು ಎನ್ನುವ ಕಳಕಳಿಯನ್ನು ನಾನು ವ್ಯಕ್ತಪಡಿಸುತ್ತಿದ್ದೇನೆ. ಇಲ್ಲ ನಾವು ಇದನ್ನೇ ಮಾಡುವವರು, ಅಂತ ತಾವು ಏನು ಹಟಮಾರಿತನ ತೋರಿಸುತ್ತಿದ್ದೀರಿ, ಅದಕ್ಕೆ ನಮ್ಮದೇನೂ ಅಭ್ಯಂತರ ಇಲ್ಲ. ಅದನ್ನು ಸ್ಪಷ್ಟ ಮಾಡಿ ಈ ಸದನದಲ್ಲಿ. ಇಲ್ಲದಿದ್ದರೆ ಅಪಾರ್ಥಕ್ಕೆ ಅವಕಾಶವಾಗುತ್ತದೆ. ಅದಕ್ಕೆ ಅವಕಾಶ ಆಗಬಾರದು. ತಾವೇ ಸೂಚನೆ ಕೊಡಿ ಸರ್ಕಾರಕ್ಕೆ.

ಅಧ್ಯಕ್ಷರು : ಸಭಾ ನಾಯಕರು ಉತ್ತರ ಪ್ರಾರಂಭ ಮಾಡಲಿ. ಈಗಾಗಲೇ ಒಂದು ಗಂಟೆಯಾಯಿತು. ಸಿದ್ದರಾಮಯ್ಯನವರೇ ಆ ಮೇಲೆ ಮಾತನಾಡಿ. ಹೀಗಾದರೆ ಇಡೀ ದಿವಸ ನಡೆದುಕೊಂಡು ಹೋಗುತ್ತದೆ. ಸಭಾ ನಾಯಕರೇ ತಾವು ಉತ್ತರ ಪ್ರಾರಂಭ ಮಾಡಿ. I am sorry. We cannot function like this..

ಶ್ರೀ ಬಿ. ಎಸ್. ಯಡಿಯೂರಪ್ಪ : ತಾವೇ ಇಲ್ಲಿ ಹೇಳಿದ್ದೀರಿ. ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸುತ್ತೇವೆ ಎಂದು.

ಅಧ್ಯಕ್ಷರು : ಈಗಲೇ ಕೊಡಿಸಬೇಕು ಎಂದು ಏನೂ ಇಲ್ಲ. ದಯಮಾಡಿ ವಿರೋಧ ಪಕ್ಷದ ನಾಯಕರು ಕೇಳಬೇಕು. ಸಭಾನಾಯಕರು ಉತ್ತರ ಶುರು ಮಾಡಲಿ. ನಿಗದಿತ ಕಾರ್ಯಕ್ರಮ ಏನು ಇದೆ, ಅದು ಚಾಲು ಆಗಲಿ. ಆಮೇಲೆ ಮಧ್ಯದಲ್ಲಿ ಮಾಡಿಸೋಣ. ಉತ್ತರ ಒಂದೂವರೆ ಗಂಟೆಗೆ ಮುಗಿದು ಹೋಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಇಂಥ ಮಹತ್ತರವಾದ ವಿಷಯವನ್ನು ಪ್ರಸ್ತಾಪ ಮಾಡಿದಾಗ ..... ಹಣಕಾಸಿನ ಸಚಿವರು ಉತ್ತರ ಕೊಡುವುದಕ್ಕೆ ಎದ್ದು ನಿಂತಾಗ .... ಇದು ಮಹತ್ವದ ವಿಷಯ ಅಲ್ಲವೆ ?

ಅಧ್ಯಕ್ಷರು : ಮಹತ್ವದ್ದು ಅಲ್ಲ ಎಂದಲ್ಲ. ಹಾಗಾದರೆ ನಾವು ಒಂದು ಕಾರ್ಯಕ್ರಮ ಎಂದು ಏಕೆ ನಿಗದಿ ಮಾಡುತ್ತೇವೆ ?

ಶ್ರೀ ಬಿ. ಎಸ್. ಯಡಿಯೂರಪ್ಪ : ಯಾವುದು ಮಹತ್ವ ? ಒಂದು ಸಾವಿರ ಇದೆ. ರಾಜ್ಯಪಾಲರ ಭಾಷಣದ ಮೇಲೆ ಅನೇಕ ವಿಷಯಗಳು ಇವೆ. ಇದೊಂದು ಪ್ರಮುಖವಾದ ವಿಷಯ. ಸುಮಾರು 35 ಕುಟುಂಬಗಳಿಗೆ ಸಂಬಂಧಪಟ್ಟದುದ್ದು. ಸಚಿವರು ಹೇಳಿ ಬಿಟ್ಟರೆ ಒಂದು ಸಾರಿ ಉತ್ತರ ಕೊಟ್ಟರೆ ಅದು ಮುಗಿದು ಹೋಗುತ್ತದೆ.

ಅಧ್ಯಕ್ಷರು : ಒಂದು ಮಾತನ್ನು ನಾನು ತಮಗೆ ಕೇಳುತ್ತೇನೆ. ತಾವು ವಿರೋಧಪಕ್ಷದ ನಾಯಕರಿದ್ದೀರಿ. ನಾವು ಅಜೆಂಡ ಏಕೆ ಇಟ್ಟುಕೊಳ್ಳಬೇಕು ಹಾಗಾದರೆ ?

ಶ್ರೀ ಬಿ. ಎಸ್. ಯಡಿಯೂರಪ್ಪ : ಅದಕ್ಕೆ ನನ್ನ ಅಡ್ಡಿ ಇಲ್ಲ. ತಾವು ಮಾಡಿ. ದಯಮಾಡಿ ಕ್ಷಮಿಸಿ. ನಿಮ್ಮ ಬಗ್ಗೆ ಗೌರವ ಇದೆ. ಸದನದ ಕಾರ್ಯಕಲಾಪಗಳ ಪಟ್ಟಿಯನ್ನು ತೆಗೆದು ನೋಡಿ. ನಾನು ನಿಮ್ಮ ಕಾನೂನು ಚೌಕಟ್ಟಿನಲ್ಲಿ ಕೆಲಸ ಮಾಡುವಾಗ ನಾನು ಎಂದೂ ಇಲ್ಲಿ ಅಡ್ಡಿ ಮಾಡಿಲ್ಲ. ನಾನು ಇಲ್ಲಿದ್ದು ಆ ಚೌಕಟ್ಟಿನೊಳಗೆ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಇಂತಹ ಪ್ರಮುಖವಾದ ವಿಷಯ ಪ್ರಸ್ತಾಪವಾದಾಗ ಸಭಾ ನಾಯಕರು ಇಲ್ಲೇ ಇದ್ದಾರೆ, ಹಣಕಾಸಿನ ಸಚಿವರು ಉತ್ತರ ಕೊಡುವುದಕ್ಕೆ ಎದ್ದಾಗ ಅವಕಾಶ ಮಾಡಿಕೊಡಿ ಎಂದು ಕೇಳಿದೆ. ಅದರಲ್ಲಿ ತಪ್ಪೇನು ಇದೆ ? ನಾನು ಸದನದ ಕಾರ್ಯ ಕಲಾಪಗಳಿಗೆ ಅಡ್ಡಿ ಮಾಡುವುದಿಲ್ಲ. ಈ ಸದನದ ಕಾನೂನಿನ ಚೌಕಟ್ಟಿನೊಳಗೆ ಕೆಲಸ ಮಾಡುವುದಕ್ಕೆ ನನ್ನಿಂದ ಯಾವುದೇ ಕಾರಣಕ್ಕೆ ಅಡ್ಡಿಯಾಗುವುದಿಲ್ಲ. ಆ ಭರವಸೆಯನ್ನು ನಾನು ತಮಗೆ ಕೊಡುತ್ತೇನೆ.

ಅಧ್ಯಕ್ಷರು : ನಾನು ಇಷ್ಟೇ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಸಾಕಷ್ಟು ಸವಿಸ್ತಾರವಾಗಿ ತಾವೆಲ್ಲರೂ ಕೂಡ ಈ ವಿಷಯದ ಬಗ್ಗೆ ಸರ್ಕಾರದ ಗಮನವನ್ನು ಸೆಳೆದಿದ್ದೀರಿ. ಈಗ ನಿಗದಿತ ಕಾರ್ಯಕ್ರಮ ಏನು ಇದೆ, ಅದಕ್ಕೆ ಸಭಾನಾಯಕರು ಉತ್ತರ ಪ್ರಾರಂಭ ಮಾಡಲಿ. ಉತ್ತರ ಮುಕ್ತಾಯವಾದ ಮೇಲೆ ಹಣಕಾಸಿನ ಸಚಿವರು ಇಲ್ಲೇ ಇರುತ್ತಾರೆ. ನಾನು ಅವರಿಗೆ ಹೇಳುತ್ತೇನೆ. ಇದಾದ ನಂತರ ಅವರು ಇದಕ್ಕೆ

ಏನು ಸ್ಪಷ್ಟೀಕರಣ ಕೊಡುತ್ತಾರೋ ಜೊತೆಗೆ ಸಭಾ ನಾಯಕರು ಇರುತ್ತಾರೆ. ಆವಾಗ ಶುರು ಮಾಡೋಣ. ಇಲ್ಲದಿದ್ದರೆ ಎಲ್ಲರೂ ಮಾತನಾಡುವುದಕ್ಕೆ ಹೋದರೆ ಇದು ಮುಕ್ತಾಯವಾಗುವುದಿಲ್ಲ. ಈಗಾಗಲೇ ಒಂದು ಗಂಟೆಯಾಗಿದೆ. ಸಭಾ ನಾಯಕರು ಉತ್ತರ ಪ್ರಾರಂಭ ಮಾಡಲಿ.

ವಿಷಯ : ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವಕ್ಕೆ ಮುಖ್ಯಮಂತ್ರಿಗಳಿಂದ ಉತ್ತರ.

ಶ್ರೀ ಹೆಚ್.ಡಿ. ದೇವೇಗೌಡ : (ಮುಖ್ಯಮಂತ್ರಿಗಳು) ಸನ್ಮಾನ್ಯ ಅಧ್ಯಕ್ಷರೆ, ನಾನು ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ನನ್ನ ಅಭಿಪ್ರಾಯವನ್ನು ಮಂಡನೆ ಮಾಡತಕ್ಕ ಕಾಲದಲ್ಲಿ ಆ ದಿನ ದಿವಗಂತ ಮುರಾರ್ಜಿಯವರ ನಿಧನದ ಕಾರಣದಿಂದ ಸಭೆ ಮುಂದೆ ಹೋಯಿತು. ನಾನು ಆವತ್ತು ಯಾವ ವಿಷಯ ಪ್ರಸ್ತಾಪ ಮಾಡುತ್ತಿದ್ದೆ, ಎನ್ನುವುದರ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿ ಮುಂದಿನ ವಿಷಯಕ್ಕೆ ಹೋಗುತ್ತೇನೆ. ಎನ್.ಜಿ.ಇ.ಎಫ್. ಮತ್ತು ಕೆಲವು ಸಂಸ್ಥೆಗಳು, ಏನು ಸರ್ಕಾರದ ಅಧೀನದಲ್ಲಿವೆ, ಸರ್ಕಾರದ ಸ್ವಾಮ್ಯದಲ್ಲಿರತಕ್ಕ ಸಂಸ್ಥೆಗಳು ಏನು ಇವೆ, ಅವುಗಳು ಅತ್ಯಂತ ಹೆಚ್ಚಿನ ನಷ್ಟವನ್ನು ಅನುಭವಿಸುತ್ತಾ ಇವೆ, ಅವುಗಳಿಗೆ ಪುನಃ ಶಕ್ತಿಯನ್ನು ತುಂಬ ಬೇಕಾದರೆ, ಸರ್ಕಾರದಲ್ಲಿ ಸಾಕಷ್ಟು ಬಂಡವಾಳ ಇದೆಯೋ ಅಥವಾ ಇಲ್ಲವೋ ಎನ್ನುವುದರ ಬಗ್ಗೆ ನಾನು ನನ್ನ ಅಭಿಪ್ರಾಯವನ್ನು ವ್ಯಕ್ತ ಪಡಿಸುತ್ತಿದ್ದ ಕಾಲದಲ್ಲಿ, ಶ್ರೀ ಮಾನ್ ಖರ್ಗೆಯವರು ಹಿಂದೆ ನಡೆದಂತಹ ಕೆಲವು ವಿಷಯಗಳನ್ನು ಸದನದ ಗಮನಕ್ಕೆ ತರಿಲಿಕ್ಕೆ ಪ್ರಯತ್ನ ಮಾಡಿದರು. ಶ್ರೀಮಾನ್ ಖರ್ಗೆಯವರು ಹೇಳಿದಂತಹ ಮಾತಿನಲ್ಲಿ ಸತ್ಯ ಇದೆ. ಯಾವುದೇ ಹೊಸ ವಿಷಯವನ್ನು ಅವರು ಹೇಳಲಿಲ್ಲ. ಆದರೆ ಇವತ್ತು ಎನ್.ಜಿ.ಇ.ಎಫ್‌ನ್ನು ಆರೋಗ್ಯಕರವಾಗಿ ಅಥವಾ ತನ್ನ ಕಾಲ ಮೇಲೆ ತಾನು ನಿಲ್ಲುವ ಶಕ್ತಿಯನ್ನು ಬೆಳೆಸಿಕೊಳ್ಳತಕ್ಕ ರೀತಿಯಲ್ಲಿ, ಆ ಸಂಸ್ಥೆಗೆ ಕಾಯಕಲ್ಪ ಚಿಕಿತ್ಸೆಯನ್ನು ಮಾಡಬೇಕಾದರೆ ಕೊನೆಯ ಪಕ್ಷ 2-3 ಕೋಟಿ ರೂಪಾಯಿಗಳ ಹಣವನ್ನು ನಾವು ಹೂಡಬೇಕಾಗುತ್ತದೆ ಎನ್ನುವ ಮಾತನ್ನು ಅಧಿಕಾರಿಗಳು ಹೇಳುತ್ತಾರೆ. ಅದೇ ರೀತಿ ಇನ್ನೂ ಕೆಲವು ಕೈಗಾರಿಕೆಗಳ ಬಗ್ಗೆ ನಾನು ಎಲ್ಲಾ ವಿಷಯಗಳನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಏನು ರೋಗಗ್ರಸ್ಥ ಕೈಗಾರಿಕೆಗಳು ಇವೆ, ಅವುಗಳ ಮೇಲೆ ಪುನಃ ಬಂಡವಾಳವನ್ನು ನಾವು ಹೂಡತಕ್ಕಂತಹದ್ದರ ಬಗ್ಗೆ ಇವತ್ತಿನ ಪರಿಸ್ಥಿತಿಯಲ್ಲಿ ಸರ್ಕಾರ ಅಷ್ಟೊಂದು ಆರ್ಥಿಕ ದೃಷ್ಟಿಯಿಂದ ಸಬಲತೆ ಇಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ವಿಷಯದಲ್ಲಿ ನಮ್ಮ ಪ್ಲಾನಿಂಗ್ ಬೋರ್ಡಿನ ಉಪಾಧ್ಯಕ್ಷರು ಕಾರ್ಮಿಕರೇ ಮುಂದೆ ಬರುವುದಾದರೆ, ಅವರನ್ನು ಇದರಲ್ಲಿ ಅಳವಡಿಸಬಹುದು ಎಂದು ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇದರ ಬಗ್ಗೆ ಸರ್ಕಾರ ಒಂದು ಅಂತಿಮ ನಿರ್ಣಯವನ್ನು ತೆಗೆದುಕೊಳ್ಳುವುದಕ್ಕಿಂತ ಮುಂಚೆ, ಈ ಎಲ್ಲಾ ವಿಷಯಗಳ ಸಾಧಕ-ಭಾದಕಗಳನ್ನು ಯೋಚನೆ ಮಾಡಿ, ಒಂದು ನಿರ್ಣಯಕ್ಕೆ ಬರುತ್ತೇವೆ. ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ,